
ಜಿಕೆವಿಕೆ ಕೃಷಿ ಮೇಳ: ಮಳಿಗೆ ಬುಕ್ಕಿಂಗ್‌ಗೆ ಸೆ.19 ಕೊನೇ ದಿನ

■ ಉದಯವಾಣಿ ಸಮಾಚಾರ

ಬೆಂಗಳೂರು: ನಗರದ ಕೃಷಿ ವಿವಿಯಲ್ಲಿ ಅ.15-18ರ ತನಕ ಹಮ್ಮಿಕೊಂಡಿರುವ ಕೃಷಿ ಮೇಳದಲ್ಲಿ ವಸ್ತು ಪ್ರದರ್ಶನ ಮಳಿಗೆಗಳ ಕಾಯ್ದಿರಿಸುವಿಕೆ ಪ್ರಾರಂಭವಾಗಿದೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ವೈವಿಧ್ಯಮಯ ಕೃಷಿ: ಮುಂದಿನ ಪೀಳಿಗೆಗೆ' ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ವಸ್ತು ಪ್ರದರ್ಶನ ಮಳಿಗೆಗಳ ಕಾಯ್ದಿರಿಸುವಿಕೆಗೆ ಸೆ.19 ಕೊನೇ ದಿನ. ಮಾಹಿತಿಗೆ ದೂ: 080-2363 8883/23330153 ಸಂಪರ್ಕಿಸಬಹುದು.

Udayavani Pg.04



ಪಾರಂಪರಿಕ ಬೆಳೆತಳಿಗಳ ಕಾವಲುಗಾರ ಫನಿ



ಜೀವಯಾನ
ಪ್ರಸನ್ನ ಆಡುವಳ್ಳಿ

ಮಳೆಗಾಲ ಬಂದರೂ ಮಾವಿನ ಹಣ್ಣಿನ ಕಾಲ ಮುಗಿದಂತಿಲ್ಲ. ಹಣ್ಣು ಹೆಚ್ಚಿಗೊರಟು ಕಾಣುವಂತೆ ಚೀಪುತ್ತ ತಿಂದಿದ್ದಷ್ಟೇ ಅಲ್ಲ, ಸಾಸವೆ, ಸೀಕರಣೆ, ಎಲ್ಲಾ ತಿಂದು, ಜ್ಯೂಸು, ಅಪ್ಪೆಮಿಡಿ ಸಾರು ಮಾಡಿ ಕುಡಿದುಬಿಟ್ಟಿದ್ದೇವೆ., ಕೇಸರಿ, ಬಾದಾಮಿ, ಅಪ್ಪೂಸು, ಬಂಗನಪಲ್ಲಿ ಕಾಟುಮಾವು ಇತ್ಯಾದಿಗಳಲ್ಲಿ ನಮುಗಿಷ್ಟವಾದ್ದೇ ಶ್ರೇಷ್ಠ ಎಂಬ ಹುಸಿ ವಾದಗಳನ್ನೂ ಮಾಡಿ ಮುಗಿಸಿದ್ದೇವೆ. ಹಾಗಿದ್ದೂ ಹೊಸ ಬಗೆಯ ಬಣ್ಣದ, ಆಕಾರದ ಮಾವಿನ ಹಣ್ಣು ಮಾರುಕಟ್ಟೆಯಲ್ಲಿ ಕಂಡಾಕ್ಷಣ ಅದನ್ನು ಕೊಂಡು, ರುಚಿ ನೋಡಿ ವಿಮರ್ಶಿಸುವವರಿಗೆ ಬಹುತೇಕರಿಗೆ ನಮಾಧಾನವಿಲ್ಲ.

ಮಾವು ಭಾರತದ್ದೇ ಹಣ್ಣಲ್ಲ? ಸೀತಾಫಲ, ಸೇಬು, ಪಪ್ಪಾಯಿ, ಸೀಬೆಗಿಂತೆ ಶತಮಾನಗಳ ಇತ್ತೀಚೆಗೆ ನಮುದ್ರ ದಾಟಿ ಬಂದಿದ್ದಲ್ಲ. ಹೀಗಾಗಿ ಭಾರತದುದ್ದಕ್ಕೂ ನೂರಾರು ಬಗೆಯ ಮಾವಿನ ತಳಗಳಿವೆ. ಅಲ್ಲಿನ ಸ್ಥಳೀಯ ಮಣ್ಣು ಬಿಸಿಲು, ಮಳೆಗೆ ಒಗ್ಗಿಕೊಂಡು ವಿಶಿಷ್ಟ ಬಗೆಯ ಫಲ ನೀಡುವ ಒಳಪ್ರದೇಶಗಳಿವೆ. ಕೈತೂ ಕೆಲವು ತಳಗಳ ರುಚಿ, ಪರಿಮಳ, ಬಣ್ಣಕ್ಕೆ ಮಾರುಹೋಗಿ, ಜತನವಾಗಿ ಅಯ್ದು ನೂರಾರು ವರ್ಷಗಳಿಂದ ಕಾಪಾಡಿ ಬೆಳೆದ ಬಗೆಬಗೆಯ ತಳಗಳಿವೆ.


ಮಾವಿನ ತಳ ನಡುವೆ ಸೈಯದ್ ಫನಿ ಖಾನ್

ನೀವು ಮಾರುಕಟ್ಟೆಯಲ್ಲಿ ಕಾಣುವ ಮೂರು ಮತ್ತೊಂದು ತಳಯನ್ನಷ್ಟೇ ಬಲ್ಲವಾದರೆ ಮಂಡ್ಯದ ಮಳವಳ್ಳಿಯ ಕಿರುಗಾವಲಿನ ಸೈಯದ್ ಫನಿ ಖಾನ್ ಅವರ ತೋಟಕ್ಕೆ ಹೋಗಬೇಕು. ಅಲ್ಲಿ ನೂರಕ್ಕೂ ಅಧಿಕ ತಳಯ ಮಾವಿನ ಮರಗಳಿವೆ. ಪ್ರತಿಯೊಂದರ ರುಚಿ, ಪರಿಮಳ, ಆಕಾರವೂ ಭಿನ್ನ. ತೋಟದ ತುಂಬ ಬೆಳೆದು ನಿಂತ ಶತಮಾನಕ್ಕೂ ಹಳೆಯ ಮರಗಳಲ್ಲಿ ಇರುವ ಬಗೆಬಗೆಯ ಮಾವಿನ ಹಣ್ಣುಗಳನ್ನು ಸವಿದೇ ನೋಡಬೇಕು. ಕೆಲವು ಸಪ್ಪೆ, ಕೆಲವು ಅತಿಸಿಹಿ, ಮತ್ತೆ ಕೆಲವನ್ನು ತಿಂದರೆ ಅದು ಮೂರಂಬಯೋ ಎನಿಸುವಷ್ಟು ಭಿನ್ನ ಪರಿಮಳ. ಪ್ರತಿರೊಂದಕ್ಕೂ ಫನಿ ಅವರ ಕುಟುಂಬ ಪಾರಂಪರಿಕವಾಗಿ ವಿಶಿಷ್ಟ ಹೆಸರುಗಳನ್ನು ಇಟ್ಟಿದೆ. ಸಚಿ ಕಾ ಅಮ್, ಮಂಜೇಶ್ವರ ಪಸಂದ್, ಕಮ್ಮಾ ಪಸಂದ್... ಹೀಗೆ ಪ್ರತಿರೊಂದಕ್ಕೂ ಆದರ ಗುಣವಿಶೇಷವನ್ನು ಹೇಳುವ ಹೆಸರುಗಳವೆ, ಪ್ರತಿ ಹೆಸರಿನ ಒಂದೆರೊ ಒಂದೊಂದು ಕತೆಯಿದೆ.

ಸೈಯದ್ ಫನಿ ಖಾನ್ ಅವರ ತೋಟಕ್ಕೆ ವಿಶಿಷ್ಟ ಇತಿಹಾಸವಿದೆ. ಟಿಪ್ಪು ಸುಲ್ತಾನನ ಕಾಲದಲ್ಲಿ ಅವರು ಸೈನಿಕರಿಗೆ ಒಂದಿಷ್ಟು ಭೂಮಿ ಕೊಟ್ಟು ಅಲ್ಲಿ ಕೃಷಿ ಮಾಡಲು ಪ್ರೋತ್ಸಾಹಿಸುತ್ತಿದ್ದರಷ್ಟೆ. ಟಿಪ್ಪುವಿನ ಸಸ್ಯಪ್ರೀತಿ ಇತಿಹಾಸದಲ್ಲಿ ಸಾಕಷ್ಟು ದಾಖಲಾಗಿದೆ. ಬೆಂಗಳೂರಿನ ಲಾಲ್‌ಬಾಗ್, ಶ್ರೀರಂಗಪಟ್ಟಣದ ಉದ್ಯಾನವನಗಳಷ್ಟೇ ಅಲ್ಲ, ಇನ್ನೂ ಹತ್ತಾರು ಕಡೆಗಳಲ್ಲಿ ಬಗೆಬಗೆಯ ವಿಶಿಷ್ಟ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಿದ್ದ ಗಂಜಾಮಿನ ಆತಿಹಣ್ಣು ದೇವನಹಳ್ಳಿಯ ಚಕ್ಕೋತಾ... ಹೀಗೆ ಹತ್ತಾರು ಬಗೆಯ ವಿದೇಶಿ ಮೂಲದ ತಳ-ಬೆಳೆಗಳನ್ನು ಪರಿಚಯಿಸಿದ್ದ ಬ್ರಿಟಿಷರ ವಿರುದ್ಧ ಹೋರಾಡಲು ನೆಪೋಲಿಯನ್‌ನ ಸಹಕಾರ ಕೇಳಿದ ಪತ್ರದಲ್ಲಿ ಯುರೋಪಿನ ಹಣ್ಣು ಇತರ ಬೆಳೆಗಳ ಬೀಜಗಳನ್ನೂ, ಅದನ್ನು ಬೆಳೆಸಲು ಬಲ್ಲ ಯುರೋಪಿಯನ್ನರನ್ನೂ ಮೈಸೂರಿಗೆ ಕಳಿಸಬೇಕೆಂದು ಟಿಪ್ಪು ಕೇಳಿಕೊಂಡಿದ್ದುಂಟು.

ಸೈಯದ್ ಫನಿ ಅವರ ಕಿರುಗಾವಲಿನ ತೋಟವೂ ಆ ಕಾಲದ್ದು. ಅವರ ಪೂರ್ವಿಕರು ನೂರಾರು ವರ್ಷಗಳ ಹಿಂದೆ ನೆಟ್ಟು ಬೆಳೆಸಿದ ಮಾವಿನ ಮರಗಳು ಇಂದಿಗೂ ತಮ್ಮ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳೂ ಕೆಲವು ಮರಗಳು ಎರಡು ಶತಮಾನಕ್ಕೂ ಹಳೆಯವೆಂದು ವೈಜ್ಞಾನಿಕವಾಗಿ ಕಾರ್ಬನ್ ಡೇಟಿಂಗ್ ಮಾಡಿ ಪ್ರಮಾಣೀಕರಿಸಿದ್ದಾರೆ.

ಟಿಪ್ಪುವಿನ ಮರಣಾನಂತರ ಬ್ರಿಟಿಷರು ಮೈಸೂರಿನ ಜನಜೀವನದ ಬಗ್ಗೆ ಬುಕಾನನ್‌ನಿಂದ ಸರ್ವೇ ಮಾಡಿಸಿದ್ದರಷ್ಟೆ. ಹಾಗೆಯೇ, ಊರೂರು ಸುತ್ತುತ್ತ ಮಳವಳ್ಳಿಗೆ ಒಂದ ಬುಕಾನನ್ ಅಲ್ಲಿ ಸುತ್ತಮುತ್ತ ಸಾಕಷ್ಟು ಮಾವಿನ ಕೋಪುಗಳಿದ್ದವೆಂದು ತನ್ನ ಪಯಣದ ದಾಖಲಿಸುವ ಪುಸ್ತಕದಲ್ಲಿಯೂ ನಮೂದಿಸಿದ್ದಾನೆ. ಬಳಿಕ ಬಂದ ಬೈಸೂರು ಅರಸರ ಕಾಲದಲ್ಲಿ ನೀರಾವರಿಯ ವ್ಯವಸ್ಥೆ ನುಗುವಾಗುತ್ತಲೇ ಭತ್ತದ ಕೃಷಿ ಹೆಚ್ಚಾಗತೊಡಗಿತು. ಹಳೆಯ ಕಾಲದ ಮಾವಿನ ಮರಗಳನ್ನೆಲ್ಲ ಕಡಿದು ಸಾಗಿಸಲಾಯ್ತು ಎನ್ನುತ್ತಾರೆ ಫನಿ ಖಾನ್. ಈಗ ಅವರ ತೋಟದ ತುಂಬೆಲ್ಲ ಇರುವ ಮಾವಿನ ಮರಗಳ ನಡುವೆಯೇ ಭತ್ತವನ್ನೂ ಬೆಳೆಯುತ್ತ, ಮರ ಆಧಾರಿತ ಕೃಷಿಯ ಸಾಧ್ಯತೆಗಳನ್ನು ತೋರಿಸುತ್ತಿದ್ದಾರೆ.

ಕಿರುಗಾವಲಿನ ಈ ತೋಟದಲ್ಲಿ ಇನ್ನೊಂದು ವಿಶೇಷವಿದೆ. ಭಾರತದ ಉದ್ದಗಲದ ಸುಮಾರು ಸಾವಿರದ ಮುನ್ನೂರಕ್ಕೂ ಅಧಿಕ ಬಗೆಯ ಸಾಂಪ್ರದಾಯಿಕ ಭತ್ತದ ತಳಗಳು ಸೈಯದ್ ಫನಿ ಖಾನರ ಸಂಗ್ರಹದಲ್ಲಿದೆ. ತಮ್ಮ ಮನೆಯ ಮಹಡಿಯಲ್ಲೇ ಪುಟ್ಟ ಭತ್ತ ಸಂಗ್ರಹಾಲಯ ಮಾಡಿ ಪ್ರತಿಯೊಂದನ್ನೂ ಅಚ್ಚುಕಟ್ಟಾಗಿ ಜೋಡಿಸಿ, ಅದರ ಹೆಸರು, ಗುಣಲಕ್ಷಣಗಳ ವಿವರ ಬರೆದಿಟ್ಟಿದ್ದಾರೆ. ಅಷ್ಟೇ ಅಲ್ಲ, ಪ್ರತಿವರ್ಷ ಆ ಬೀಜಗಳನ್ನು ಬಿತ್ತಿ ಆಸಕ್ತರಿಗೆ ಹಂಚುತ್ತಾರೆ.

ಕಾಡಿನಲ್ಲಿನ ವೈವಿಧ್ಯವಷ್ಟೇ ಅಲ್ಲ ಪ್ರತಿ ಪ್ರಭೇದದೊಳಗಿನ ಇಂಥ ತಳ-ವಿಶಿಷ್ಟತೆಗಳನ್ನೂ ಉಳಿಸಿಕೊಳ್ಳುವುದು ಬಹುಮುಖ್ಯ. ಏಕ ಬೆಳೆ ಕೃಷಿಯ ಹಾಗೆಯೇ ಏಕ ತಳಯ ಕೃಷಿಯೂ ಅಪಾಯಕಾರಿಯೇ. ತುಸು ಹವಾಮಾನ ಬದಲಾದರೂ, ಕೀಟಾದಿ ಜಂತುಗಳು ಬಂದಾಗ ಏಕತಳಯ ಬೆಳೆ ಬಲಿಯಾಗುವುದೇ ಹೆಚ್ಚು.


ಏಕಬೆಳೆ- ತಳ ಕೃಷಿಯು ಮಾಡಬಹುದಾದ ಅವಾಂತರಗಳಿಗೆ ಹತ್ತೊಂಬತ್ತನೆಯ ಶತಮಾನದ ನಡುಭಾಗದಲ್ಲಿ ಐರ್ಲೆಂಡಿನಲ್ಲಿ ನಡೆದ ಬರಗಾಲವೇ ಸಾಕ್ಷಿ. ಸೂಕ್ಷ್ಮಾಣು ಜೀವಿಯೊಂದು ಉಂಟುಮಾಡುವ ಅಲೂಗಡ್ಡೆ ಕೊಳೆ ರೋಗ ಕೆಲವೇ ವರ್ಷಗಳಲ್ಲಿ ಐರ್ಲೆಂಡಿನಲ್ಲಿ ಆಹಾರ ಕೊರತೆಯನ್ನುಂಟುಮಾಡಿತು. ಭೀಕರ ಬರಗಾಲಕ್ಕೆ ಸುಮಾರು 10 ಲಕ್ಷ ಜನ ಬಲಿಯಾದರು. ಆಹಾರ ಹುಡುಕಿ ಅಷ್ಟೇ ಸಂಖ್ಯೆಯ ಜನ ಗುಳೆಹೋದರು. ಒಂದು ದಶಕದ ಅವಧಿಯಲ್ಲಿ ದೇಶದ ಜನಸಂಖ್ಯೆಯ ಕಾಲುಭಾಗ ಕಡಿಮೆಯಾಗಿಹೋಯ್ತು. ಆಲೂಗಡ್ಡೆಯ ಮೂಲಸ್ಥಳವಾದ ಮಧ್ಯ ಹಾಗೂ ದಕ್ಷಿಣ ಅಮೆರಿಕದಲ್ಲಿ ಹುಡುಕಿದ್ದರೆ ಹತ್ತಾರು ರೋಗ ನಿರೋಧಕ ತಳಗಳಿದ್ದವು. ಅವುಗಳು ಹೆಚ್ಚೇನೂ ಇಳುವರಿ ನೀಡದಿದ್ದರೂ ಅವುಗಳ ರೋಗ ನಿರೋಧಕ ಗುಣವನ್ನು ಬಳಸಿ ಹೊಸ ತಳಗಳನ್ನು ಮಾಡಿದ್ದರೆ ಆ ದೇಶದ ಭವಿಷ್ಯವೇ ಬದಲಾಗುತ್ತಿತ್ತು.

''ದಶಕಗಳ ಹಿಂದೆ ತೋಟದ ಮಾವನ್ನು ಹರಾಜು ಪಡೆಯಲು ಜನ ಸಾಲುಗಟ್ಟಿ ಕಾದಿರುತ್ತಿದ್ದರು. ಈಗ ಮಾರುಕಟ್ಟೆಯ ಮಾಮೂಲಿ ತಳಗಳ ನಡುವೆ ಇಂಥ ಅವರೂಪದ ತಳಯ ಮಾವುಗಳಿಗೆ ಬೇಡಿಕೆ ಕಡಿಮೆಯಾಗಿದೆ,'' ಎನ್ನುತ್ತಾರೆ ಸೈಯದ್ ಫನಿ ಖಾನ್. ಕೃಷಿ ವಿಶ್ವವಿದ್ಯಾಲಯಗಳಂಥ ಸಂಸ್ಥೆಗಳು ಮಾಡಬೇಕಾದ ಕೆಲಸವನ್ನು ಕಿರುಗಾವಲಿನ ಸೈಯದ್ ಫನಿ ಖಾನ್, ಕಳೆದ ಬಾರಿ ಪದ್ಮ ಪುರಸ್ಕೃತರಾದ ಕಾಸರಗೋಡಿನ ಸತ್ಯನಾರಾಯಣ ಬೇಳೆರಿಯಂಥ ರೈತರು ಮಾಡುತ್ತಿದ್ದಾರೆ. ಹೆಚ್ಚೆಂದರೆ ಒಂದಿಷ್ಟು ಪ್ರಶಸ್ತಿ ನೀಡಿ ಸರಕಾರಗಳೂ ಕೈತೊಳೆದುಕೊಳ್ಳುತ್ತಿವೆ.

ಬದಲಾಗುತ್ತಿರುವ ಹವಾಮಾನದಿಂದಾಗಿ ಮುಂಬರುವ ದಿನಗಳಲ್ಲಿ ಕೃಷಿಗೆ ಹೊಸ ಸವಾಲುಗಳು ಎದುರಾಗಲಿವೆ. ಹೊಲ-ತೋಟಗಳಲ್ಲಿನ ಜೀವವೈವಿಧ್ಯ ಇದ್ದಾಗಲಷ್ಟೇ ನಮ್ಮ ಊಟದ ಬಟ್ಟಲು ತುಂಬಲಿದೆ. ಮಾರುಕಟ್ಟೆಯಲ್ಲಿ ಆಪ್ಪೂಸು, ಬಂಗನಪಲ್ಲಿಗಳಷ್ಟೇ ಇದ್ದರೆ ಏನು ಚಂದ ಹೇಳಿ? ಅಲ್ಲಿ ಕಾಟುಮಾವಿಗೂ ತುಸು ಜಾಗವಿರಲಿ.

Vijayakarnataka Pg.06

ಚಹಾಗೇಕೆ ಹಾಲು?



ಚಹಾಕ್ಕೆ ಹಾಲು ಸೇರಿಸಿಕೊಂಡು ಕುಡಿಯುವ ಪದ್ಧತಿ ಭಾರತದಲ್ಲಿ ಬಿಟ್ಟರೆ ಇನ್ಯಾವ ದೇಶದಲ್ಲೂ ಇಲ್ಲ. ಈ ರೀತಿ ಚಹಾ ಕುಡಿಯುವ ಪದ್ಧತಿ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಭಾರತಕ್ಕೆ ಬಂತು. 19ನೇ ಶತಮಾನದಲ್ಲಿ ಚೀನಾಕ್ಕೆ ಪೈಪೋಟಿ ನೀಡಲು ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಚಹಾ ವ್ಯಾಪಾರ ಆರಂಭಿಸಿತು. ಆಗ ಭಾರತದಲ್ಲಿ ವ್ಯಾಪಕವಾಗಿ ಚಹಾ ಬೆಳೆಯಲಾ ಯಿತು. ಆದರೆ ಆರಂಭದಲ್ಲಿ ಅದು ಬ್ರಿಟಿಷರ ಬಳಕೆ ಮತ್ತು ರಫ್ತಿಗಾಗಿ ಮಾತ್ರ ಇತ್ತು. 1900ರ ದಶಕದಲ್ಲಿ ಭಾರತೀಯರಲ್ಲೂ ಚಹಾವನ್ನು ಜನಪ್ರಿಯಗೊಳಿಸಲು ಬ್ರಿಟಿಷರು ಅದಕ್ಕೆ ಹಾಲು ಮತ್ತು ಸಕ್ಕರೆ ಸೇರಿಸುವ ಸಲಹೆ ನೀಡಿದರು. ನಿಧಾನವಾಗಿ ಈ ಅಭ್ಯಾಸ ಜನರಲ್ಲಿ ಬೆಳೆದು ಬಂತು. ನಂತರ ಭಾರತೀಯರು ತಮ್ಮದೇ ಆದ ರುಚಿ ಮತ್ತು ಮಸಾಲೆಗಳನ್ನು ಸೇರಿಸಿ ಅದಕ್ಕೆ ಹೊಸ ರೂಪವನ್ನೇ ಕೊಟ್ಟರು. ಏಲಕ್ಕಿ, ಶುಂಠಿ, ದಾಲ್ಚಿನ್ನಿ ಮತ್ತು ಲವಂಗದಂತಹ ಮಸಾಲೆಗಳು ಚಹಾಕ್ಕೆ ಅದ್ಭುತ ಸುವಾಸನೆ ಮತ್ತು ರುಚಿ ನೀಡಿದವು.

Vishwavani Pg.11

ಪೌಷ್ಟಿಕಾಂಶ, ರೈಸ್ ಬ್ರಾನ್ ಎಣ್ಣೆ ಬಗ್ಗೆ ಜಾಗೃತಿ ಕಾರ್ಯಕ್ರಮ

ಆರೋಗ್ಯಕ್ಕೆ ಗುಣಮಟ್ಟದ ಅಡುಗೆ ಎಣ್ಣೆ ಅಗತ್ಯ: ಡಾ.ಮತೀನ್ | ಜಿಇಎಫ್ ಇಂಡಿಯಾ, ಐಎಪಿಇಎನ್ ಇಂಡಿಯಾದಿಂದ ಆಯೋಜನೆ

■ ಉದಯವಾಣಿ ಸಮಾಚಾರ

ಬೆಂಗಳೂರು: ಜಿಇಎಫ್ ಇಂಡಿಯಾ ಹಾಗೂ ಇಂಡಿಯನ್ ಅಸೋಸಿಯೇಷನ್ ಫಾರ್ ಪ್ಯಾರೆಂಟರಲ್ ಆಂಡ್ ಎಂಟರಲ್ ನ್ಯೂಟ್ರಿಷನ್ (ಐಎಪಿಇಎನ್) ಸಹಯೋಗದಲ್ಲಿ ಪೌಷ್ಟಿಕಾಂಶದ ಅರಿವು ಮತ್ತು ರೈಸ್ ಬ್ರಾನ್ ಎಣ್ಣೆಯ ದೈನಂದಿನ ಮಹತ್ವ ವಿಷಯದ ಕುರಿತು ವಿಶೇಷ ಪೌಷ್ಟಿಕಾಂಶ ಜಾಗೃತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಪೌಷ್ಟಿಕ ತಜ್ಞರು, ಆಹಾರ ತಜ್ಞರು, ಆರೋಗ್ಯ ವೃತ್ತಿಪರರು ಹಾಗೂ ಉದ್ಯಮ ಕ್ಷೇತ್ರದ ಪ್ರತಿನಿಧಿಗಳು ಭಾಗವಹಿಸಿ ವೈಜ್ಞಾನಿಕ ಆಧಾರಿತ ಪೌಷ್ಟಿಕಾಂಶ ಮತ್ತು ಆರೋಗ್ಯಕರ ಅಡುಗೆ ಎಣ್ಣೆಗಳ ಮಹತ್ವದ ಕುರಿತು ಚರ್ಚಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಖ್ಯಾತ ಕನ್ಸಲೆಂಟ್ ನ್ಯೂಟ್ರಿಷನಿಸ್ಟ್ ಡಾ.ಮತೀನ್ ಆ್ಯಾಗಲವರು ಮಾತನಾಡಿ, ಹೃದಯ ಸಂಬಂಧಿ ಕಾಯಿಲೆಗಳು, ಮಧುಮೇಹ ಹಾಗೂ ಬೊಜ್ಜು ಸೇರಿದಂತೆ ಸಾಂಕ್ರಾಮಿಕವಲ್ಲದ ಕಾಯಿಲೆಗಳನ್ನು ತಡೆಗಟ್ಟುವಲ್ಲಿ ಸಮತೋಲಿತ ಆಹಾರ ಪದ್ಧತಿ ಹಾಗೂ ಉತ್ತಮ ಗುಣಮಟ್ಟದ ಅಡುಗೆ ಎಣ್ಣೆಯ ಆಯ್ಕೆ ಮಹತ್ವದಾಗಿದೆ. ಕೊಬ್ಬನ್ನು ಸಂಪೂರ್ಣವಾಗಿ ತೆಗೆಸುವುದಕ್ಕಿಂತ ಉತ್ತಮ ಗುಣಮಟ್ಟದ ಕೊಬ್ಬನ್ನು ಮಿತವಾಗಿ ಸೇವಿಸುವುದು ಆರೋಗ್ಯಕ್ಕೆ ಅಗತ್ಯ ಎಂದು ತಿಳಿಸಿದರು.



ಆರೋಗ್ಯಕರ ಆಹಾರ ಪದ್ಧತಿಗೆ ಉತ್ತೇಜನ: ಸುಜಾತಾ ಸ್ಟೀಫನ್

ಎಪಿಇಎನ್ ಪ್ರಧಾನ ಕಾರ್ಯದರ್ಶಿ ಸುಜಾತಾ ಸ್ಟೀಫನ್ ಮಾತನಾಡಿ, ಸಾರ್ವಜನಿಕರಲ್ಲಿ ಪೌಷ್ಟಿಕಾಂಶದ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಆರೋಗ್ಯ ವೃತ್ತಿಪರರು ಹಾಗೂ ಸಾರ್ವಜನಿಕರ ನಡುವೆ ವೈಜ್ಞಾನಿಕ ಮಾಹಿತಿ ತಲುಪಿಸುವ ಮೂಲಕ ಆರೋಗ್ಯಕರ ಆಹಾರ ಪದ್ಧತಿಯನ್ನು ಉತ್ತೇಜಿಸುವುದು ನಮ್ಮ ಉದ್ದೇಶವಾಗಿದೆ. ಜಿಇಎಫ್ ಇಂಡಿಯಾ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮವು ಆರೋಗ್ಯಕರ ಅಡುಗೆ ಪದ್ಧತಿ ಹಾಗೂ ರೈಸ್ ಬ್ರಾನ್ ಎಣ್ಣೆಯ ಪೌಷ್ಟಿಕ ಮೌಲ್ಯದ ಕುರಿತು ಜಾಗೃತಿ ಮೂಡಿಸಲು ಉತ್ತಮ ವೇದಿಕೆಯಾಗಿದೆ ಎಂದರು.

> ಗ್ರಾಹಕರಿಗೆ ವಿಶ್ವಾಸಾರ್ಹ ಪೌಷ್ಟಿಕಾಂಶದ ಮಾಹಿತಿ ತಲುಪಿಸುವುದು ನಮ್ಮ ಆದ್ಯತೆ. ಫ್ರೀಡಂ ರೈಸ್ ಬ್ರಾನ್ ಎಣ್ಣೆಯಲ್ಲಿ 10,000 ಪಿಪಿಎಂಕ್ಕಿಂತ ಹೆಚ್ಚಿನ ಒರೈಝನಾಲ್ ಹಾಗೂ ನೈಸರ್ಗಿಕ ಆಂಟಿ ಆಕ್ಸಿಡೆಂಟ್‌ಗಳಿದ್ದು, ಇದು ದೈನಂದಿನ ಅಡುಗೆಗೆ ಉತ್ತಮ ಆಯ್ಕೆಯಾಗಿದೆ.
> ● ಚೇತನ್ ಪಿಂಪಲ್ಖುಟೆ, ಫ್ರೀಡಂ ಹೆದ್ದಿ ಕುಕ್ಕಿಂಗ್ ಆಯಿಲ್ಸ್ ಮಾರ್ಕೆಟಿಂಗ್ ಮುಖ್ಯಸ್ಥ

ಕೊಲೆಸ್ಟಾಲ್ ನಿಯಂತ್ರಣಕ್ಕೆ ನೆರವು: ರೈಸ್ ಬ್ರಾನ್ ಎಣ್ಣೆಯಲ್ಲಿ ಮೊನೋ ಅನ್‌ಸ್ಯಾಚುರೇಟೆಡ್ ಮತ್ತು ಪಾಲಿ ಅನ್‌ಸ್ಯಾಚುರೇಟೆಡ್ ಕೊಬ್ಬಿನಾಂಶಗಳ ಜೊತೆಗೆ ಒರೆ ಝನಾಲ್, ಟೋಕೋಫೆರಾಲ್ ಹಾಗೂ ಟೋಕೋಟಿಯೆನಾಲ್ಸ್ ಮೊದಲಾದ ಪೌಷ್ಟಿಕ ಅಂಶಗಳಿವೆ. ಕೊಲೆಸ್ಟಾಲ್ ನಿಯಂತ್ರಣಕ್ಕೆ ಇದು ನೆರವಾಗಲಿದೆ. ಪ್ರಕಟಿತ ವೈಜ್ಞಾನಿಕ ಅಧ್ಯಯನಗಳ ಪ್ರಕಾರ, ರೈಸ್ ಬ್ರಾನ್ ಎಣ್ಣೆಯ ಬಳಕೆಯಿಂದ ಕಟ್ಟಿ ಕೊಲೆಸ್ಟಾಲ್ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ. ಭಾರತೀಯ ಅಡುಗೆ ವಿಧಾನಗಳಿಗೆ ಇದು ಸೂಕ್ತವಾದ ಎಣ್ಣೆಯಾಗಿದೆ. ಯಾವುದೇ ಎಣ್ಣೆಯೂ ಆರೋಗ್ಯಕ್ಕೆ ಸಂಪೂರ್ಣ ಪರಿಹಾರವಲ್ಲ ಎಂದರು.

ಅದರೊಂದಿಗೆ ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿ ಇರಬೇಕು ಎಂದು ಅವರು ಒತ್ತಿ ಹೇಳಿದರು. ವೈಜ್ಞಾನಿಕ ಸಾಕ್ಷ್ಯಾಧಾರಿತ ಮಾಹಿತಿ ಆಧಾರದ ಮೇಲೆ ಆಹಾರ ಆಯ್ಕೆ ಮಾಡುವುದು ಆತ್ಮಸ್ಥೈರ್ಯ, ರೈಸ್ ಬ್ರಾನ್ ಎಣ್ಣೆ ಉತ್ತಮ ಪೌಷ್ಟಿಕ ಗುಣಲಕ್ಷಣ ಹೊಂದಿದ್ದು, ಆರೋಗ್ಯಕರ ಆಹಾರ ಪದ್ಧತಿಯ ಭಾಗವಾಗಬಹುದು. ಆದರೆ, ದೀರ್ಘಕಾಲದ ಆರೋಗ್ಯವು ಸಮಗ್ರ ಆಹಾರ ಪದ್ಧತಿ ಮತ್ತು ಉತ್ತಮ ಜೀವನಶೈಲಿಯ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದರು.

ಅತಿಮುಖ್ಯವಾಗಿ ಪಾಲ್ಗೊಂಡಿದ್ದ ತಜ್ಞರು ಕಾರ್ಯಕ್ರಮದ ಮೂಲಕ ಸಮತೋಲಿತ ಆಹಾರ, ನಿಯಮಿತ ದೈಹಿಕ ಚಟುವಟಿಕೆ ಹಾಗೂ ಸೂಕ್ತ ಅಡುಗೆ ಎಣ್ಣೆಯ ಆಯ್ಕೆಯ ಮೂಲಕ ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

Udayavani Pg.03

No water from Bhadra dam for kharif season

SHIVAMOGGA, DHNS: Bhadra dam authorities have said that water won't be released into left and right canals of the project for monsoon crop, and water in reservoir will be used only for drinking purpose.

In a press note, Bhadra Project Irrigation Advisory Committee said the state government has issued an order directing the officials concerned to use water stored in the dam for drinking purpose.

So, farmers of the Bhadra command area have been asked to cooperate with the government.

Deccan Herald Pg.04

ಕೃಷಿ ವೆಚ್ಚದ ಸಂಕಷ್ಟದ ನಡುವೆ ಅನ್ನದಾತನಿಗೆ ವರವಾದ ಕೇಂದ್ರದ ಆರ್ಥಿಕ ಭದ್ರತೆ | 8.92 ಲಕ್ಷ ರೈತರಿಗೆ 178.45 ಕೋಟಿ ಜಮೆ

ಕಲ್ಯಾಣ ಕರ್ನಾಟಕದ ರೈತರಿಗೆ ಪಿಎಂ ಕಿಸಾನ್ ಆಸರೆ

ನ ದೇವೇಂದ್ರ ಜಾತಿ ಕಲಬುರಗಿ

ಕೃಷಿಯನ್ನೇ ಬದುಕಿನ ಮುಖ್ಯ ಆಧಾರವಾಗಿಸಿಕೊಂಡಿರುವ ಕಲ್ಯಾಣ ಕರ್ನಾಟಕ ಭಾಗದ ಲಕ್ಷಾಂತರ ರೈತ ಕುಟುಂಬಗಳಿಗೆ ಪ್ರಧಾನಮಂತ್ರಿ ಕಿಸಾನ ಸಮ್ಮಾನ ನಿಧಿ (ಪಿಎಂ-ಕಿಸಾನ್) ಯೋಜನೆ ಈ ಮಾರಿಯ ಮುಂಗಾರು ವಿಳಂಬದ ಮಧ್ಯೆಯೂ ಪ್ರಮುಖ ಆರ್ಥಿಕ ಆಸರೆಯಾಗಿ ಪರಾಮುಖವಿದೆ. 2026-27ನೇ ಸಾಲಿನ 21ನೇ ಕಂತಿನ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಒಟ್ಟು 8,92,260 ರೈತ ಫಲಾನುಭವಿಗಳ ಬ್ಯಾಂಕ್ ಖಾತೆಗೆ 178.45 ಕೋಟಿ ನೇರವಾಗಿ ಜಮೆಯಾಗಿದೆ.

ಈ ಭಾಗದ ಬಹುತೇಕ ರೈತರು ಮಳೆ ಆಧಾರಿತ ಕೃಷಿಯನ್ನೇ ನಚ್ಚಿಕೊಂಡಿದ್ದಾರೆ. ಪ್ರಸ್ತುತ ಎಲ್‌ನೋಣ ಪರಾಣಾಮದಿಂದಾಗಿ ಮುಂಗಾರು ಮಳೆ ವಿಳಂಬವಾಗಿದ್ದು, ಬಿತ್ತನೆಯ ಈ ಸಂದರ್ಭದಲ್ಲಿ ಹಣ್ಣಾಕ್ಷಿಯಾದ ಕೃಷಿ ಪೆಚ್ಚಿನ ರೈತರಿಗೆ ಹೊರೆಯಾಗಿತ್ತು. ಇಂತಹ ಸಮಯದಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ಜಾಧವ್ ಅವರ ಖಾತೆಗೆ ಹಣ ಜಮೆಯಾಗಿರುವುದು ರೈತರಲ್ಲಿ ಆತ್ಮವಿಶ್ವಾಸ ಮೂಡಿಸಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲಬುರಗಿ ಜಿಲ್ಲೆಯೇ ಅತಿ ಹೆಚ್ಚು ಫಲಾನುಭವಿಗಳನ್ನು ಹೊಂದಿದ್ದು, ಇಲ್ಲಿ 1.85 ಲಕ್ಷಕ್ಕೂ ಹೆಚ್ಚು ರೈತರಿಗೆ 37.17 ಕೋಟಿ ಮೌಲ್ಯದ ನೆರವಾಗಿ ರೈತರ ಖಾತೆಗಳಿಗೆ ತಲುಪಿದ್ದು 2,000 ರೂಪಾಯಿ ಕಂತು ಬೀದರ್, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳ ಅರ್ಹ ಫಲಾನುಭವಿ ರೈತ ಕುಟುಂಬಗಳಿಗೆ ಬಿಡುಗಡೆಯಾಗಿದೆ. ಈ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 1,85,847 ರೈತರಿಗೆ 37.17 ಕೋಟಿ ರೂ. ಜಮೆಯಾಗಿದೆ.

ಪಿಎಂ-ಕಿಸಾನ್ 23ನೇ ಕಂತು: ಕಲ್ಯಾಣ ಕರ್ನಾಟಕದ ಜಿಲ್ಲಾವಾರು ಚಿತ್ರಣ

ಜಿಲ್ಲೆ	ಒಟ್ಟು ಫಲಾನು ಭವಿಗಳು	ಜಮೆಯಾದ ಮೊತ್ತ (ಕೋ. ರೂ.ಗಳಲ್ಲಿ)
ಕಲಬುರಗಿ	1,85,847	37.17 ಕೋಟಿ ರು.
ರಾಯಚೂರು	1,59,212	31.84 ಕೋಟಿ ರು.
ಬೀದರ್	1,26,731	25.35 ಕೋಟಿ ರು.
ಬಳ್ಳಾರಿ	1,23,808	24.76 ಕೋಟಿ ರು.
ಕೊಪ್ಪಳ	1,15,587	23.12 ಕೋಟಿ ರು.
ವಿಜಯನಗರ	92, 663	18.53 ಕೋಟಿ ರು.
ಯಾದಗಿರಿ	88,412	17.68 ಕೋಟಿ ರು.
ಒಟ್ಟು	8,92,260	178.45 ಕೋಟಿ ರು.

ತಾಂತ್ರಿಕ ದೋಷ: ಇಳಿಕೆಯಾದ ಫಲಾನುಭವಿಗಳ ಸಂಖ್ಯೆ!

ಈಗಿದ 22ನೇ ಕಂತಿನಲ್ಲಿ ಕಲ್ಯಾಣ ಕರ್ನಾಟಕ ಭಾಗದ 9.38 ಲಕ್ಷ ರೈತರಿಗೆ 187.70 ಕೋಟಿ ರು. ವಿಡುಗಡೆಯಾಗಿತ್ತು. ಆದರೆ, ಈ ಬಾರಿ ಫಲಾನುಭವಿಗಳ ಸಂಖ್ಯೆ 8.92 ಲಕ್ಷಕ್ಕೆ ಇಳಿಕೆಯಾಗಿದೆ. ಇ-ಕೆವೈಸಿ, ಭೂಮಿ ಪರಿಶೀಲನೆಯಾದರೂ ಆಧಾರ್-ಬ್ಯಾಂಕ್ ಖಾತೆ ಜೋಡಣೆ ಸಮಸ್ಯೆ ಹಾಗೂ ಭೂ ದಾಖಲೆಗಳ ವ್ಯತ್ಯಾಸದಿಂದಾಗಿ ಕೆಲವು ರೈತರು ಈ ಕಂತಿನ ಲಾಭದಿಂದ ವಂಚಿತರಾಗಿದ್ದಾರೆ. ಅರ್ಹ ರೈತರು ತಕ್ಷಣವೇ ತಮ್ಮ ದಾಖಲೆಗಳನ್ನು ಸರಿಪಡಿಸಿಕೊಳ್ಳುವಂತೆ ಕೃಷಿ ಇಲಾಖೆ ಕೋರಿದೆ.





ಈ ಬಾರಿ ಮುಂಗಾರು ಮಳೆ ಎಲ್ ನಿನೋ ಪರಿಣಾಮದಿಂದಾಗಿ ಚೊರು ವಿಳಂಬವಾಗಿದ್ದು, ಇಂತಹ ಸಂಕಷ್ಟಗಳ ನಡುವೆಯೂ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕದ ರೈತರಿಗೆ ಮೋದಿ ಸರಕಾರದ ಪಿಎಂ-ಕಿಸಾನ್ ಯೋಜನೆ ಆರ್ಥಿಕ ಭದ್ರತೆಯನ್ನಾಗಿ ಕಾರ್ಯ ನಿರ್ವಹಿಸುತ್ತಿದೆ. ಲಕ್ಷಾಂತರ ರೈತ ಕುಟುಂಬಗಳ ಬದುಕಿಗೆ ಬಲ ತುಂಬುತ್ತಿರುವ ಈ ಆರ್ಥಿಕ ನೆರವಿನಿಂದ ನಮಗೆ ಬೀಜ, ಗೊಬ್ಬರ ಇತ್ಯಾದಿ ಖರೀದಿಗೆ ಅನುಕೂಲವಾಗಲಿದೆ.

-ಸುಯೋಧಕಾಂತ ಪವಾರ್, ಫಲಾನುಭವಿ, ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲಬುರಗಿ ಜಿಲ್ಲೆ ಅತಿ ಹೆಚ್ಚು ಫಲಾನುಭವಿಗಳನ್ನು ಹೊಂದಿದೆ. ಜಿಲ್ಲೆಯ 1.85 ಲಕ್ಷಕ್ಕೂ ಹೆಚ್ಚು ರೈತರಿಗೆ 37.17 ಕೋಟಿ ರು. ಜಮೆಯಾಗಿದ್ದು, ಭಾಗದ ರೈತರಿಗೆ ಇದು ದೊಡ್ಡ ಆರ್ಥಿಕ ನೆರವಾಗಿದೆ. ಮುಂಗಾರು ವಿಳಂಬ, ಬೆಳೆ ನಷ್ಟ ಹಾಗೂ ಹೆಚ್ಚುತ್ತಿರುವ ಕೃಷಿ ವೆಚ್ಚದ ನಡುವೆಯೂ ಪಿಎಂ-ಕಿಸಾನ್ ಯೋಜನೆಯ 2,000 ಕಂತು ರೈತರಿಗೆ ಸಮಯೋಚಿತ ನೆರವಾಗುತ್ತಿದೆ.

-ಸುಮಂತ್ ಜಾಬೆಲ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ ಕಲಬುರಗಿ

Vishwavani Pg.05

Two-day conference on agri tech at IIPM from today

▶ **BENGALURU, DHNS:** A two-day international conference on agricultural technology will be organised at the campus of Indian Institute of Plantation Management (IIPM) in Jnanabharati here to highlight innovations, sustainability and value chain-driven business strategies, starting Friday.

In a press release, the IIPM said the event will feature over 100 research papers by scholars, researchers and industry professionals from across the country and abroad. It seeks to provide a global platform to deliberate on the opportunities and challenges ahead.

Union Minister of State for MSME, Labour and Employment Shobha Karandlaje is expected inaugurate the conference. The meet is expected to generate actionable insights and policy recommendations, the director of the institute said in a release.

Vishwavani Pg.05